**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂಃ 42/2025**

ಸರ್ಕಾರದ ಪರವಾಗಿ ಖಾನಾಪುರ ಪೋಲಿಸರು

... ಫಿರ್ಯಾದಿ.

:ವಿರುದ್ಧ:

**ಮಂಥನ ದಶರಥ ಪಾಟೀಲ**
ವಯಸ್ಸುಃ 21 ವರ್ಷ ಉದ್ಯೋಗಃ ಖಾಸಗಿ ಕೆಲಸ
ವಾಸಃ ಲೋಕೋಳಿ ತಾಃ ಖಾನಾಪೂರ

...ಆರೋಪಿ.

**ದೋಷಾರೋಪಣೆ**

ಶ್ರೀ ವಿರೇಶ ಹಿರೇಮಠ. ಬಿ.ಎ., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ ಆದ ನಾನು ಆರೋಪಿತನ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಘನ ನ್ಯಾಯಾಲಯದ ವ್ಯಾಪ್ತಿ ಗೆ ಒಳಪಡುವ ಖಾನಾಪೂರ ಪೋಲಿಸ್ ಠಾಣಾ ವ್ಯಾಪ್ತಿಯ ಖಾನಾಪೂರ ತಾಲೂಕು ಲೋಕೋಳಿ ಗ್ರಾಮ ಹದ್ದಿಯಲ್ಲಿ ಆರೋಪಿಯಾದ ನೀನು ನಿನ್ನ ನೀಲಿ ಬಣ್ಣದ ರಿಯಲಮೀ ಕಂಪನಿಯ ಸ್ಕ್ರೀನ್ ಟಚ್ ಮೋಬೈಲ್‌ನ್ನು ಉಪಯೋಗಿಸುತ್ತಿದ್ದು, ಆರೋಪಿಯಾದ ನೀನು ನಿನ್ನ ಮೊಬೈಲ್‌ದಲ್ಲಿ ಇನ್‌ಸ್ಟಗ್ರಾಂ ಆ್ಯಪ್ ಬಳಸುತ್ತಿದ್ದು ಇನ್‌ಸ್ಟಗ್ರಾಂ ಆ್ಯಪ್‌ದಲ್ಲಿ drama_queen_arati8 ಎಂಬ ಐಡಿಯನ್ನು ಕ್ರಿಯೇಟ ಮಾಡಿ ಚಾಸಾ. 1, 7, ರಿಂದ 12 ರವರ ಮಾನಕ್ಕೆ ಕುಂದುಟು ಮಾಡುವ ಉದ್ದೇಶದಿಂದ ತನ್ನ ಮೊಬೈಲದಿಲ್ಲಿ ಚಾಸಾ. 1 ರವರ ಹಾಗೂ ಚಾಸಾ. 1ರವರ ಗೆಳತಿಯರಾದ ಚಾಸಾ. 7 ರಿಂದ 12 ರವರ ಭಾವಚಿತ್ರಗಳನ್ನು ಎಡಿಟ್ ಮಾಡಿ ದಿನಾಂಕಃ 17.10.2023 ರಂದು ಬೆಳಿಗ್ಗೆ 11 ಗಂಟೆಗೆ ಚಾಸಾ. 1 ರವರ ಇನ್‌ಸ್ಟಗ್ರಾಂ ಐಡಿ drama_queen_arati ನೇದ್ದಕ್ಕೆ ತಾನು ತಯಾರಿಸಿದ drama_queen_arati8 ಎಂಬ ಖೊಟ್ಟಿ ಇನ್‌ಸ್ಟಗ್ರಾಂ ಐಡಿಯಿಂದ ಫ್ರೆಂಡ್ ರಿಕ್ವೆಸ್ಟ ಕಳುಹಿಸಿ ಚಾಸಾ. 1 ಮತ್ತು ಚಾಸಾ. 7 ರವರ ಮುಖವಿರುವ ಪೋಟೋಗಳನ್ನು ಎಡಿಟ್ ಮಾಡಿ ಯಾವುದೋ ನಗ್ನವಾಗಿರುವ ಪೋಟೋದ ದೇಹಕ್ಕೆ ಅಂಟಿಸಿ ಕಳುಹಿಸಿದ್ದು, ದಿನಾಂಕಃ 18.10.2023 ರಂದು ಪುನಃ ಅದೇ ಅಕೌಂಟದಿಂದ ಚಾಸಾ. 8 ರಿಂದ 11 ರವರ ಮುಖಗಳ ಪೋಟೋಗಳನ್ನು ಎಡಿಟ್ ಮಾಡಿ ನಗ್ನವಾಗಿರುವ ಯಾವುದೋ ದೇಹದ ಪೋಟೊಗಳಿಗೆ ಅಂಟಿಸಿ ಚಾಸಾ. 1 ರವರ ಇನ್‌ಸ್ಟಗ್ರಾಂ ಐಡಿಗೆ ಕಳುಹಿಸಿದ್ದು, ಮತ್ತು ಅದೇ ಅಕೌಂಟದಿಂದ ದಿನಾಂಕಃ 28.10.2023 ರಂದು ಚಾಸಾ. 12 ರವರ ಪೋಟೋವನ್ನು ಎಡಿಟ್ ಮಾಡಿ ನಗ್ನವಾಗಿರುವ ದೇಹದ ಪೋಟೋಗೆ ಅಂಟಿಸಿ ಅವರ pragathi4226 ನೇದ್ದಕ್ಕೆ ಕಳುಹಿಸಿದ್ದು, ಯಾವುದೇ ಎಲೆಕ್ಟ್ರಾನಿಕ್ ರೂಪದ ವಿಷಯವು ಅಶ್ಲೀಲ ಲೈಂಗಿಕ ಕ್ರಿಯೆಯನ್ನು

MPatil

ತೋರಿಸಿದರೆ, ಆ ರೀತ್ಯಾ ಇನ್ಫರ್ಮೇಷನ್ ಟೆಕ್ನಾಲಜಿ ಕಾಯಿದೆ, 2000 ರ ಸೆಕ್ಷನ್ 67(a) ಅಡಿಯಲ್ಲಿ, ಈ ನ್ಯಾಯಾಲಯದ ಸಂಜ್ಞೆಯೊಳಗೆ ಅಪರಾಧ ಮಾಡಿರುತ್ತೀರಿ.

ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮುಂದುವರೆದು, ಆರೋಪಿತನು ಚಾಸಾ. 1 ಮತ್ತು 7 ರಿಂದ 12 ರವರಿಗೆ ಮಹಿಳೆಯರ ನಮ್ರತೆಯನ್ನು ಅವಮಾನಿಸುವ ಉದ್ದೇಶದಿಂದ ಮಾಡುವ ಪದ, ಸನ್ನೆ ಅಥವಾ ಕ್ರಿಯೆಗಳಿಗೆ ಸಂಬಂಧಿಸಿದ ಮಹಿಳೆಯ ನಮ್ರತೆಗೆ ಧಕ್ಕೆ ತರುವ ಉದ್ದೇಶದಿಂದ ಯಾವುದೇ ಪದ ಹೇಳಿದರೆ, ಶಬ್ದ ಮಾಡಿದರೆ, ಸನ್ನೆ ಮಾಡಿದರೆ ಅಥವಾ ಯಾವುದೇ ನಗ್ನವನ್ನು ಪ್ರದರ್ಶಿಸಿದ್ದು, ಆ ರೀತ್ಯಾ ಭಾ.ದಂ.ಸಂ. ಕಲಂ.506 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಅಪರಾಧ ಮಾಡಿರುತ್ತೀರಿ.

ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮುಂದುವರೆದು, ಆರೋಪಿತನು ಚಾಸಾ. 1ರವರಿಗೆ ವಾಪಸ್ ಬಂದರೆ ನಿನಗೆ ಖಲಾಸ ಮಾಡುತ್ತೇವೆ ಅಂತಾ ಜೀವಾ ಬೆದರಿಕೆ ಹಾಕಿ, ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿ, ಆ ರೀತ್ಯಾ ಭಾ.ದಂ.ಸಂ. ಕಲಂ.506 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಅಪರಾಧ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ: 10.11.2025 ರಂದು ಓದಿ ಹೇಳಲಾಯಿತು. ಅದನ್ನು ಅವರು ತಿಳಿದು ಅದರ ಉತ್ತರಗಳನ್ನು ಅವರ ಶಬ್ದಗಳಲ್ಲಿ ನಮೂದಿಸಲಾಯಿತು)

10/11

( ವಿರೇಶ ಹಿರೇಮಠ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಖಾನಾಪೂರ
ದಿನಾಂಕಃ **10.11.2025**

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**
**ಖಾನಾಪೂರ**

**ಸಿ.ಸಿ.ನಂಃ 42/2025**

ಸರ್ಕಾರದ ಪರವಾಗಿ ಖಾನಾಪುರ ಪೋಲಿಸರು ... ಪಿರ್ಯಾದಿ.

:ವಿರುದ್ದ: .

**ಮಂಥನ ದಶರಥ ಪಾಟೀಲ**

..ಆರೋಪಿತರುಗಳು

**ಆಪಾದನೆ**

ಪ್ರಶ್ನೆ.1 :ಈಗ ಓದಿ ಹೇಳಲಾದ ಆಪಾದನೆ ತಿಳಿಯಿತೇ?

ಉತ್ತರ : ಅರ್ಥವಾಯಿತು

ಪ್ರಶ್ನೆ.2 : ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರ : ವಿಚಾರಣೆ ಆಗಬೇಕು

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ ಃ 10 ನೇ ದಿವಸ, ನವೆಂಬರ್ ಮಾಹೆ 2025

10/11/25

**(ವಿರೇಶ ಹಿರೇಮಠ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.